# ಕರ್ನಾಟಕ ಆಯವ್ಯಯ 2010-2011

## ಮುಖ್ಯಾಂಶಗಳು

**ಆಯವ್ಯಯದ 2010-11ರ ಪಕ್ಷಿನೋಟ**

**(ಕೋಟಿ ರೂ.ಗಳಲ್ಲಿ)**

- **ಒಟ್ಟು ಸ್ವೀಕೃತಿ : 68,564**
  - ರಾಜಸ್ವ ಸ್ವೀಕೃತಿ : 53,639
  - ಬಂಡವಾಳ ಸ್ವೀಕೃತಿ: 14,925
- **ಒಟ್ಟು ವೆಚ್ಚ : 70,063**
  - ರಾಜಸ್ವ ವೆಚ್ಚ : 53,138
  - ಬಂಡವಾಳ ವೆಚ್ಚ : 16,925
- **ವಿತ್ತೀಯ ಕೊರತೆ : 9,708**
  (ಜಿಎಸ್‌ಡಿಪಿಯ ಶೇ. 2.96)
- **ರಾಜಸ್ವ ಮಿಗತೆ : 500**
  (ಜಿಎಸ್‌ಡಿಪಿಯ ಶೇ. 0.15)

**ಆಯವ್ಯಯದ ಹಂಚಿಕೆಗಳು**

- ವಿವಿಧ ಇಲಾಖೆಗಳಿಗೆ ಆಯವ್ಯಯದಿಂದ ಹಂಚಿಕೆ ಮಾಡಲಾದ ಯೋಜನೆ ಮತ್ತು ಯೋಜನೇತರ ಅನುದಾನಗಳ ವಿವರಗಳು ಕೆಳಗಿನಂತಿವೆ:

| | |
|---|---|
| ಕೃಷಿ ಮತ್ತು ತೋಟಗಾರಿಕೆ | ರೂ.2094 ಕೋಟಿ |
| ಶಿಕ್ಷಣ ಮತ್ತು ಉನ್ನತ ಶಿಕ್ಷಣ | ರೂ.10505 ಕೋಟಿ |
| ನಗರಾಭಿವೃದ್ಧಿ | ರೂ.5883 ಕೋಟಿ |
| ಇಂಧನ | ರೂ.3547 ಕೋಟಿ |
| ನೀರಾವರಿ | ರೂ.5180 ಕೋಟಿ |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | ರೂ.3442 ಕೋಟಿ |
| ಲೋಕೋಪಯೋಗಿ | ರೂ.2909 ಕೋಟಿ |
| ಕಂದಾಯ | ರೂ.2764 ಕೋಟಿ |
| ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ | ರೂ.2673 ಕೋಟಿ |
| ಒಳಾಡಳಿತ | ರೂ.2345 ಕೋಟಿ |
| ಸಮಾಜ ಕಲ್ಯಾಣ | ರೂ.2671 ಕೋಟಿ |
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ರೂ.1832 ಕೋಟಿ |
| ವಸತಿ | ರೂ.928 ಕೋಟಿ |

- ಸಾಮಾಜಿಕ ವಲಯಕ್ಕೆ ಹೆಚ್ಚಿನ ಆದ್ಯತೆ
    - ಶಿಕ್ಷಣ ಆಯವ್ಯಯವು ರೂ.1605 ಕೋಟಿ ಹೆಚ್ಚಳ
    - ಆರೋಗ್ಯ ಆಯವ್ಯಯ ರೂ.384 ಕೋಟಿ ಹೆಚ್ಚಳ
- ಒಟ್ಟು ವೆಚ್ಚದಲ್ಲಿ ಸಾಮಾಜಿಕ ಸೇವೆಗಳು ಶೇ.38 ರಷ್ಟಿದ್ದು ಆರ್ಥಿಕ ಸೇವೆಗಳು ಶೇ.32ರಷ್ಟನ್ನು ಪಡೆದಿವೆ. ಉಳಿದುದ್ದನ್ನು ಸಾಮಾನ್ಯ ಸೇವೆಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳ ಅನುದಾನಕ್ಕಾಗಿ ವಿನಿಯೋಗಿಸಲಾಗುವುದು.

**ರಾಜ್ಯ ಯೋಜನಾ ಗಾತ್ರ**

- ರಾಜ್ಯ ಯೋಜನಾ ಗಾತ್ರವು ಶೇ.19ರಷ್ಟು ಹೆಚ್ಚಾಗಿ ರೂ. 31,000 ಕೋಟಿ ಆಗಿವೆ. ತಲಾ ಆದಾಯದ ಲೆಕ್ಕದಲ್ಲಿ ರಾಜ್ಯಗಳಿಗೆ ಇದು ಅತಿ ಹೆಚ್ಚಿನ ಯೋಜನಾ ಗಾತ್ರವಾಗಿದೆ.

**ಪ್ರಮುಖ ವಲಯಗಳು**

**ಕೃಷಿ ಮತ್ತು ಸಂಬಂಧಿತ ವಲಯಗಳು**

- **ರೈತರಿಗೆ ನೆರವು**
    - ನೀರಾವರಿ ಪಂಪ್‌ಸೆಟ್‌ಗಳಿಗೆ, ಭಾಗ್ಯಜ್ಯೋತಿ \ ಕುಟೀರ ಜ್ಯೋತಿಗೆ ಒದಗಿಸಲಾಗುತ್ತಿರುವ ಉಚಿತ ವಿದ್ಯುಚ್ಛಕ್ತಿಗೆ – ರೂ.2500 ಕೋಟಿ
    - ವಾಣಿಜ್ಯ ಬ್ಯಾಂಕುಗಳು ಹಾಗೂ ಸಹಕಾರ ಸಂಘಗಳಿಂದ ರೈತರಿಗೆ ರಿಯಾಯಿತಿ ದರದಲ್ಲಿ ಸಾಲ ಒದಗಿಸಲು ರೂ. 320 ಕೋಟಿ
    - ಸಹಕಾರ ಸಂಘಗಳ ಮೂಲಕ ಸಂಗ್ರಹಿಸುವ ಪ್ರತಿ ಲೀಟರ್ ಹಾಲಿಗೆ ರೂ.2 ವಿಶೇಷ ಸಹಾಯ ನಿಡುವ ಯೋಜನೆಯ ಮುಂದುವರಿಕೆ
    - ಸಾವಯವ ಕೃಷಿಯನ್ನು ಅಳವಡಿಸಲು 100 ಕೋಟಿ
    - ಯಶಸ್ವಿನಿ ಯೋಜನೆಯನ್ನು ಮುಂದುವರೆಸಲು ರೂ.40 ಕೋಟಿ
    - ಕರಾವಳಿ ಭಾಗದ ಮೀನುಗಾರರಿಗೆ ನೀಡುತ್ತಿರುವ ಮಾರಾಟ ತೆರಿಗೆರಹಿತ ಡೀಸೆಲ್‌ನ ಪ್ರಮಾಣ – 75000 ದಿಂದ 85000 ಕಿಲೋ ಲೀಟರ್‌ಗಳಿಗೆ ಹೆಚ್ಚಳ
    - ಆರ್‌ಟಿಸಿ ಪ್ರತಿಯನ್ನು ಪಡೆಯಲು ವಿಧಿಸಲಾಗುತ್ತಿರುವ ಬಳಕೆದಾರರ ಶುಲ್ಕವನ್ನು ರೂ. 15 ರಿಂದ ರೂ.10ಕ್ಕೆ ಇಳಿಕೆ
- **ಕೃಷಿ ಮೂಲಸೌಕರ್ಯ**
    - 2 ಲಕ್ಷ ಜಲಪೂರಣ ಸ್ಥಾವರಗಳನ್ನು ನಿರ್ಮಿಸಲು 'ಜಲಸಿರಿ' ಆಂದೋಲನ – ರೂ.500 ಕೋಟಿ ವೆಚ್ಚದಲ್ಲಿ ಪ್ರಾರಂಭ
    - 126 ತಾಲ್ಲೂಕುಗಳಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ಮತ್ತು ಗ್ರಾಮೀಣ ಜನವಸತಿಗಳಿಗೆ ವಿದ್ಯುಚ್ಛಕ್ತಿ ಸರಬರಾಜನ್ನು ಉತ್ತಮಪಡಿಸಲು "ನಿರಂತರ ಜ್ಯೋತಿ" ಯೋಜನೆ – ಎರಡು ವರ್ಷಗಳಲ್ಲಿ ಅನುಷ್ಠಾನ. 2010-11ರಲ್ಲಿ 70 ತಾಲ್ಲೂಕುಗಳಲ್ಲಿ ರೂ.1200 ಕೋಟಿ ಹೂಡಿಕೆ. ವಿತರಣಾ ಕಂಪನಿಗಳಿಗೆ ಬಂಡವಾಳ ನೆರವು
    - ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ಆಧುನಿಕ ತಂತ್ರಜ್ಞಾನವುಳ್ಳ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆ – ರೂ. 10 ಕೋಟಿ
    - ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ ಸಂತೆಮಾಳಗಳ ಅಭಿವೃದ್ಧಿ – ಪ್ರತಿ ತಾಲ್ಲೂಕಿಗೆ ರೂ.1 ಕೋಟಿ ವೆಚ್ಚ

- **ಹೊಸ ಸಂಸ್ಥೆಗಳು**
  - ರೂ.100 ಕೋಟಿ ಬಂಡವಾಳದಲ್ಲಿ 'ಅಂತರ್‌ಗಂಗಾ ಸೂಕ್ಷ್ಮ ನೀರಾವರಿ ನಿಗಮ'ದ ಸ್ಥಾಪನೆ
  - ಕರ್ನಾಟಕ ಮಾವು ಮಂಡಳಿ ಸ್ಥಾಪನೆ – ರೂ.10 ಕೋಟಿ
  - ಆಹಾರ ಸಮಸ್ಕರಣಾ ಅಭಿವೃದ್ಧಿ ನಿಗಮ ಸ್ಥಾಪನೆ – ರೂ.10 ಕೋಟಿ ಬಂಡವಾಳ ಸಹಾಯ
  - ಶಿವಮೊಗ್ಗದಲ್ಲಿ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯದ ಸ್ಥಾಪನೆ– ರೂ.10 ಕೋಟಿ ಅನುದಾನ
  - ಮೈಸೂರು, ಹಿರಿಯೂರು, ಶಿರಸಿ ಮತ್ತು ಕೊಪ್ಪಳದಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪನೆ – ತಲಾ ರೂ.5 ಕೊಟಿ ಅನುದಾನ
  - ಅಥನಿಯಲ್ಲಿ ಪಶುಸಂಗೋಪನಾ ವಿದ್ಯಾಲಯ ಸ್ಥಾಪನೆ – ರೂ.15 ಕೋಟಿ ಅನುದಾನ
  - ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಸಂಸ್ಥೆಯ ಸ್ಥಾಪನೆ
- **ಸಂಸ್ಥೆಗಳಿಗೆ ಬೆಂಬಲ**
  - ಪತ್ತಿನ ಸಹಕಾರಿ ಸಂಘಗಳು ಮತ್ತು ಬ್ಯಾಂಕುಗಳ ಪುನಶ್ಚೇತನಕ್ಕಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ರೂ.600 ಕೋಟಿ
  - ಕರ್ನಾಟಕ ಸಹಕಾರಿ ಮಾರುಕಟ್ಟೆ ಮಂಡಳಿಗೆ 400 ಕೋಟಿ ರೂ.ಗಳ ದುಡಿಯುವ ಬಂಡವಾಳ
  - ಮೈಸೂರು ಸಕ್ಕರೆ ಕಾರ್ಖಾನೆಯ ಆಧುನೀಕರಣಕ್ಕಾಗಿ ರೂ.20 ಕೋಟಿ
- **ಸೇವೆಗಳ ವಿಸ್ತರಣೆ**
  - ಭೂಚೇತನ ಕಾರ್ಯಕ್ರಮವನ್ನು ರಾಜ್ಯದ ಇತರ 15 ಜಿಲ್ಲೆಗಳಿಗೆ ವಿಸ್ತರಣೆ – ಕೃಷಿ ವಿಜ್ಞಾನ ಕೇಂದ್ರಗಳಿಗೆ ರೂ.15 ಕೋಟಿ ಅನುದಾನ

**ಗ್ರಾಮೀಣಾಭಿವೃದ್ಧಿ**

- **ಪಂಚಾಯತ್ ಆಡಳಿತ**
  - ಪಂಚಾಯತ್ ರಾಜ್ ಸಂಸ್ಥೆಗಳ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರವನ್ನು ಇನ್ನಷ್ಟು ಬಲಪಡಿಸುವಿಕೆ – ಶೇ.50 ರಷ್ಟು ಸ್ಥಾನಗಳ ಮೀಸಲಾತಿ
- **ಗ್ರಾಮೀಣ ಮೂಲ ಸೌಕರ್ಯ**
  - ರಾಜ್ಯದ ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ ಸುವರ್ಣಗ್ರಾಮೋದಯ ಯೋಜನೆಗೆ ರೂ.1000 ಕೋಟಿ
  - ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆ – ರಾಜ್ಯದ ಪಾಲಿನ ವಂತಿಕೆ ರೂ.110 ಕೋಟಿ
  - 5000 ಕಿ.ಮೀ. ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ರಾಜ್ಯ ಕಾರ್ಯಕ್ರಮಗಳ ಅಡಿಯಲ್ಲಿ ರೂ.632 ಕೋಟಿ ಪ್ರತ್ಯೇಕ ಅನುದಾನ
  - 2010–11ನೇ ಸಾಲಿನಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶಗಳ ಕುಡಿಯುವ ನೀರಿನ ಯೋಜನೆಗಾಗಿ ಕೇಂದ್ರದ ಅನುದಾನವೂ ಸೇರಿದಂತೆ ರೂ.1000 ಕೋಟಿ ವಿನಿಯೊಗ
  - ಚಾಮರಾಜನಗರ ಜಿಲ್ಲೆಯ ಗ್ರಾಮಗಳಿಗೆ ಕಬಿನಿ ನದಿಯಿಂದ ಕುಡಿಯುವ ನೀರನ್ನು ಒದಗಿಸಲು ರೂ.100 ಕೋಟಿ ಯೋಜನೆ ತಯಾರಿಕೆ
  - ಸಿರಿಗೆರೆ ಪಟ್ಟಣಕ್ಕೆ ಮತ್ತು ಮಾರ್ಗಮಧ್ಯೆ ಇರುವ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗಾಗಿ ರೂ.25 ಕೋಟಿ
  - ತುಮಕೂರು ಜಿಲ್ಲೆಯ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗಾಗಿ ರೂ.25 ಕೋಟಿ

- **ಕೂಲಿ ಉದ್ಯೋಗ**
    - 2010–11ರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ.3000 ಕೋಟಿ ವೆಚ್ಚದಲ್ಲಿ 18 ಕೋಟಿ ಮಾನವ ದಿನಗಳ ಉದ್ಯೋಗ ಒದಗಿಸುವಿಕೆ

**ಹಿಂದುಳಿದ ಪ್ರದೇಶಗಳ ಅಭಿವೃದ್ಧಿ**

- ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ.2584 ಕೋಟಿ ಅನುದಾನ
- ಮಾನ್ಯ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗಾಗಿ ರೂ.300 ಕೋಟಿ

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**

- ರಾಜ್ಯದಲ್ಲಿ ಶಾಲೆಗೆ ಹೋಗುವ ಮಕ್ಕಳಿಗೆ ಕನಿಷ್ಠ 10ನೇ ತರಗತಿಯವರೆಗೆ ಶಿಕ್ಷಣ ಒದಗಿಸುವ ಸಂಕಲ್ಪ
- ಶಾಲೆಗಳಲ್ಲಿ ಮತ್ತು ಪದವಿ ಪೂರ್ವ ಶಾಲೆಗಳಲ್ಲಿ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಒದಗಿಸಲು 2010–11ರಲ್ಲಿ ರೂ.100 ಕೋಟಿ ಅನುದಾನ
- ಪ್ರೌಢ ಶಾಲೆಯ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಉಚಿತವಾಗಿ ಬೈಸಿಕಲ್ ನೀಡುವ ಯೋಜನೆ ಮುಂದುವರಿಕೆ – ರೂ.200 ಕೋಟಿ
- ರೂ.80 ಕೋಟಿಗಳನ್ನು 250 ಪದವಿ ಪೂರ್ವ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ ಒದಗಿಸಲಾಗುವುದು
- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನದ ಅಡಿಯಲ್ಲಿ 74 ಮಾದರಿ ಪ್ರೌಢ ಶಾಲೆಗಳ ಸ್ಥಾಪನೆ. 545 ಪ್ರೌಢ ಶಾಲೆಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಯೋಜನೆಗಳು
- ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಹೊಂದುವ ಸರ್ಕಾರಿ ಶಾಲೆಯ ಶಿಕ್ಷಕರಿಗೆ – ರೂ. 5 ಕೋಟಿ ವಿಶೇಷ ಅನುದಾನ ಒದಗಿಸಲಾಗುವುದು

**ಉನ್ನತ ಶಿಕ್ಷಣ**

- ತುಮಕೂರು ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯ, ಬಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ತಲಾ ರೂ.10 ಕೋಟಿ ಅನುದಾನ – ಹಂಪೆಯ ಕನ್ನಡ ವಿಶ್ವವಿದ್ಯಾನಿಲಯಕ್ಕೆ ರೂ.5 ಕೋಟಿ
- ಬಳ್ಳಾರಿಯಲ್ಲಿ ನೂತನ ವಿಜಯನಗರ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ರೂ.10 ಕೋಟಿ
- ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣದ ಸೌಲಭ್ಯಗಳನ್ನು ಉತ್ತಮಪಡಿಸಲು ವಿಶ್ವ ಬ್ಯಾಂಕ್ ನೆರವಿನ ಟೆಕ್ವಿಪ್ ಯೋಜನೆಯಡಿ ರೂ.80 ಕೋಟಿ
- ನೂತನವಾಗಿ ಪ್ರಾರಂಭಿಸಲಾದ 10 ಇಂಜಿನಿಯರಿಂಗ್ ಕಾಲೇಜುಗಳು ಮತ್ತು 22 ಪಾಲಿಟೆಕ್ನಿಕ್‌ಗಳ ಕಟ್ಟಡ ಹಾಗೂ ಯಂತ್ರೋಪಕರಣಗಳಿಗಾಗಿ ರೂ.76 ಕೋಟಿ
- 100 ಪದವಿ ಕಾಲೇಜುಗಳಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳ ಬೋಧನೆಗೆ ಅವಕಾಶ ಕಲ್ಪಿಸಲು ರೂ. 50 ಕೋಟಿ
- ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿ ಹೆಚ್ಚಿನ ಭಾಷಾ ಜ್ಞಾನ, ಸಂವಹನ ಚತುರತೆ, ಮತ್ತು ವ್ಯಕ್ತಿತ್ವ ನಿರೂಪಣೆಯ ವಿಶೇಷ ತರಬೇತಿಗಾಗಿ ರೂ.10 ಕೋಟಿ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**

- ಆರೋಗ್ಯ ಕಾರ್ಯಕ್ರಮಗಳಿಗಾಗಿ ಯೋಜನಾ ನೆರವಿನಲ್ಲಿ ಶೇ.31ರಷ್ಟು ಹೆಚ್ಚಳ

- 'ವಾಜಪೇಯಿ ಆರೋಗ್ಯ ಶ್ರೀ' ಯೋಜನೆಗಾಗಿ – ರೂ.40 ಕೋಟಿ
- 142 ತಾಲ್ಲೂಕು ಆಸ್ಪತ್ರೆಗಳನ್ನು ಪ್ರಾಥಮಿಕ ರೆಫರೆಲ್ ಆಸ್ಪತ್ರೆಗಳಾಗಿ ಉನ್ನತೀಕರಣ. ತಾಲ್ಲೂಕು ಆಸ್ಪತ್ರೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ನಿರ್ಮಾಣ – ರೂ.100 ಕೋಟಿ
- ಗ್ರಾಮೀಣ ಮಹಿಳೆಯರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಹೆರಿಗೆ ಸೌಲಭ್ಯ. ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆ ಸೌಲಭ್ಯವನ್ನು ಪಡೆದ ಗ್ರಾಮೀಣ ಮಹಿಳೆಯರಿಗೆ ರೂ.1000 ಸಹಾಯ
- 2010–11ರಿಂದ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ನೋಂದಾಯಿಸಿರುವ ಎಲ್ಲಾ ಹೆಣ್ಣುಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಉಚಿತ ಚಿಕಿತ್ಸೆ
- ವಿವಿಧ ಹಂತದ ಆಸ್ಪತ್ರೆಗಳಲ್ಲಿ 5021 ಅರೆ ವೈದ್ಯಕೀಯ ಸಿಬ್ಬಂದಿಯ ನೇಮಕ

**ವೈದ್ಯಕೀಯ ಶಿಕ್ಷಣ**

- ಆಯ್ದ ಕಾಲೇಜುಗಳಲ್ಲಿ ಪ್ರವೇಶ ಸಾಮರ್ಥ್ಯ ಹೆಚ್ಚಿಸಲು ರೂ.20 ಕೋಟಿ
- ಬಳ್ಳಾರಿಯ ವಿಮ್ಸ್ ಸಂಸ್ಥೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಖಾಸಗಿ ಸಹಭಾಗಿತ್ವದೊಡನೆ ಸ್ಥಾಪಿಸಲು ರೂ.10 ಕೋಟಿ
- ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.20 ಕೋಟಿ
- ಹೃದಯದ ಶಸ್ತ್ರ ಚಿಕಿತ್ಸೆ ಮತ್ತು ಮೂತ್ರಪಿಂಡದ ಕಸಿಗೆ ಒಳಗಾಗಬೇಕಾದ ಬಡರೋಗಿಗಳಿಗೆ ನೆರವಾಗಲು ಹೃದಯ ಸಂಜೀವಿನಿ ಹಾಗೂ ಕಿಡ್ನಿ ಸುರಕ್ಷಾ ಯೋಜನೆಗಳಿಗೆ ರೂ.10 ಕೋಟಿ ಒದಗಿಸಲಾಗುತ್ತಿದೆ
- ಹುಬ್ಬಳ್ಳಿಯಲ್ಲಿ ಕ್ಯಾನ್ಸರ್ ಚಿಕಿತ್ಸೆಯ ಸೌಲಭ್ಯವನ್ನು ಕಲ್ಪಿಸಲು ಕಿದ್ವಾಯಿ ಆಸ್ಪತ್ರೆಯ ಶಾಖೆಯನ್ನು ತೆರೆಯಲು ರೂ.5 ಕೋಟಿ
- ಮಾತಾ ಅಮೃತಾಮಯೀ ಅವರ ಪ್ರತಿಷ್ಠಾನದಿಂದ ಉನ್ನತ ದರ್ಜೆಯ ಆಸ್ಪತ್ರೆಯನ್ನು ಬೆಂಗಳೂರಿನ ಸಮೀಪದ ಕೆಂಗೇರಿಯ ಬಳಿ ಸ್ಥಾಪಿಸಲು ಸರ್ಕಾರದಿಂದ 15 ಎಕರೆ ಜಮೀನು ಹಾಗೂ ರೂ.5 ಕೋಟಿ ಅನುದಾನ

**ಆಯುಷ್ ಚಿಕಿತ್ಸೆ**

- ಭಾರತ ಸರ್ಕಾರದ ನೆರವಿನಿಂದ ಭಾರತೀಯ ಆಯುಷ್ ವೈದ್ಯ ವಿಜ್ಞಾನ ಸಂಸ್ಥೆಯ ಸ್ಥಾಪನೆ
- ಬೆಂಗಳೂರು, ಮೈಸೂರು, ಮತ್ತು ಬಳ್ಳಾರಿಯಲ್ಲಿ ಸರ್ಕಾರಿ ಆಯುರ್ವೇದ ಆಸ್ಪತ್ರೆಗಳನ್ನು ಉನ್ನತೀಕರಿಸಲು ರೂ.5
- ಕೋಟಿ

**ಸಮಾಜ ಕಲ್ಯಾಣ**

- 2009–10ರಲ್ಲಿ ವಿಶೇಷ ಘಟಕ ಯೋಜನೆಗೆ ಮತ್ತು ಗಿರಿಜನ ಉಪಯೋಜನೆಗಳಿಗೆ ಕ್ರಮವಾಗಿ ಒದಗಿಸಿದ್ದ ರೂ.2916.60 ಕೋಟಿ ಹಾಗೂ ರೂ.1144.00 ಕೋಟಿಗಳಿಗೆ ಎದುರಾಗಿ 2010–11ರಲ್ಲಿ ಕ್ರಮವಾಗಿ ರೂ.3358.78 ಕೋಟಿ ಹಾಗೂ ರೂ.1344.19 ಕೋಟಿಗಳಿಗೆ ಹೆಚ್ಚಳ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಕ್ರೋಢೀಕೃತ ಅನುದಾನ ರೂ.600 ಕೊಟಿ ಯಿಂದ ರೂ.800 ಕೋಟಿಗೆ ಹೆಚ್ಚಳ
- ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಕಿತ್ತೂರು ಚೆನ್ನಮ್ಮ ವಸತಿ ಶಾಲೆಗಳನ್ನು ಅಭಿವೃದ್ಧಿ ಪಡಿಸಲು 150 ಶಾಲೆಗಳಿಗೆ ಕಟ್ಟಡಗಳನ್ನು ಒದಗಿಸಲು ರೂ.150 ಕೋಟಿ

- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ನೀಡುವ ಮಾಸಿಕ ಆಹಾರ ವೆಚ್ಚವನ್ನು ಕ್ರಮವಾಗಿ ರೂ. 450 ರಿಂದ 650ಕ್ಕೆ ಹಾಗೂ ರೂ.650 ರಿಂದ 750ಕ್ಕೆ ಹೆಚ್ಚಳ. ಅದರಂತೆಯೇ ಅನುದಾನಿತ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೂ ಸಹ ಹೆಚ್ಚಳ.

- 10 ಜಿಲ್ಲೆಗಳಲ್ಲಿ ಮಾದರಿ ವಿದ್ಯಾರ್ಥಿನಿಲಯಗಳನ್ನು ತೆರೆಯಲು ರೂ.20 ಕೋಟಿ

- ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಜಗಜೀವನರಾಮ್ ಭವನಗಳನ್ನು ನಿರ್ಮಿಸಲು ರೂ.20 ಕೋಟಿ ಅನುದಾನ

**ಹಿಂದುಳಿದ ವರ್ಗಗಳ ಅಭಿವೃದ್ಧಿ**

- ಹಿಂದುಳಿದ ವರ್ಗಗಳಾದ ಕಮ್ಮಾರರು, ಕುಂಬಾರರು, ಅಕ್ಕಸಾಲಿಗರು, ಅಗಸರು, ಮುಂತಾದ ಪಾರಂಪರಿಕ ವೃತ್ತಿಗಳನ್ನು ಅವಲಂಬಿಸಿರುವ ಸಮಾಜಗಳ ಆರ್ಥಿಕ ಚಟುವಟಿಕೆಗಳಿಗೆ ಬೆಂಬಲ ನೀಡಲು ರೂ.20 ಕೋಟಿ

- 'ಕುಂಭಕಲಾ ಅಭಿವೃದ್ಧಿ ಮಂಡಳಿ'ಯನ್ನು ಸ್ಥಾಪಿಸಲು ರೂ.3 ಕೋಟಿ

**ಅಲ್ಪಸಂಖ್ಯಾತರ ಕಲ್ಯಾಣ**

- 2009-10ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ರೂ.167 ಕೋಟಿ ಒದಗಿಸಿದ್ದು, 2010-11ರಲ್ಲಿ ರೂ.207 ಕೋಟಿಗೆ ಹೆಚ್ಚಳ

- ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ವಿವಿಧ ವೃತ್ತಿಗಳಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ರೂ.10 ಕೋಟಿ

- ಶಾದಿ ಮಹಲ್/ಕಲ್ಯಾಣ ಮಂಟಪಗಳ ನಿರ್ಮಾಣಕ್ಕಾಗಿ ರೂ.10 ಕೋಟಿ

- ಬೆಂಗಳೂರಿನಲ್ಲಿ ಹಜ್ ಭವನದ ನಿರ್ಮಾಣಕ್ಕಾಗಿ ರೂ.5 ಕೋಟಿ

- ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಭಾಷಾ ಮಾಧ್ಯಮವನ್ನು ಬದಲಿಸಲು ಸಾಧ್ಯವಾಗುವಂತೆ ವಿಶೇಷ ಭಾಷಾ ತರಬೇತಿಗಾಗಿ ರೂ.3 ಕೋಟಿ

- ಶಿವನಸಮುದ್ರದ ಬಳಿಯಿರುವ ಮರ್ದಾನ್-ಎ-ಘೈಬ್ ಮತ್ತು ಬೆಂಗಳೂರಿನ ತವಕ್ಕಲ್ ಮಸ್ತಾನ್ ದರ್ಗಾದ ಅಭಿವೃದ್ಧಿಗಾಗಿ ರೂ.1 ಕೋಟಿ

**ಮಹಿಳಾ ಮತ್ತು ಮಕ್ಕಳ ಕಲ್ಯಾಣ**

- 2010-11ರಲ್ಲಿ ಭಾಗ್ಯಲಕ್ಷ್ಮಿ ಯೋಜನೆಯನ್ನು ಮುಂದುವರೆಸಲು ರೂ.380 ಕೋಟಿ

- ಒಂದು 'ಸಮಗ್ರ ಪೌಷ್ಟಿಕತಾ ಅಭಿಯಾನ'ವನ್ನು ಪ್ರಾರಂಭಿಸಲು ರೂ.5 ಕೋಟಿ

- ಸಿದ್ಧ ಉಡುಪುಗಳ ತಯಾರಿಕೆಯಲ್ಲಿ ತರಬೇತಿ ನೀಡುವ ಕೇಂದ್ರಗಳನ್ನು ಜಿಲ್ಲೆಗಳಲ್ಲಿ ಸ್ಥಾಪಿಸಲು ಸಿದ್ಧ ಉಡುಪು ವಿನ್ಯಾಸ ಮತ್ತು ತರಬೇತಿ ಸಂಸ್ಥೆಗೆ ರೂ.10 ಕೋಟಿ ಅನುದಾನ

- ರಾಜ್ಯದಲ್ಲಿರುವ 50,000 ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ವಂತಿಗೆ ಆಧಾರಿತ ಪಿಂಚಣಿ ವ್ಯವಸ್ಥೆಯನ್ನು ಪ್ರಾರಂಭಿಸಲು 2010-11ರಲ್ಲಿ ರೂ.10 ಕೋಟಿ

- ಬುದ್ಧಿಮಾಂದ್ಯ ಮತ್ತು ಆಟಿಸಂ ನ್ಯೂನತೆಯುಳ್ಳ ಹಾಗೂ ಅಂಧ ಮಕ್ಕಳ ಪಾಲನೆಗಾಗಿ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳಿಗೆ ರೂ.20 ಕೋಟಿ ಅನುದಾನ

**ವಸತಿ**

- ಗ್ರಾಮೀಣ ಪ್ರದೇಶಗಳಲ್ಲಿ 2008-09 ಮತ್ತು 2009-10ರಲ್ಲಿ ಇಂದಿರಾ ಆವಾಸ್, ಆಶ್ರಯ ಮತ್ತು ಡಾ.ಅಂಬೇಡ್ಕರ್ ಯೋಜನೆಗಳ ಅಡಿಯಲ್ಲಿ ಒಟ್ಟು 5.35 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ. ಇದಲ್ಲದೆ, ನೆರೆಪೀಡಿತ ಗ್ರಾಮಗಳಲ್ಲಿ ಸುಮಾರು 75000 ಮನೆಗಳನ್ನು ನಿರ್ಮಿಸುವ ಕಾರ್ಯವು ಪ್ರಗತಿಯಲ್ಲಿದ್ದು ಈ ಮನೆಗಳ ನಿರ್ಮಾಣ ಕಾರ್ಯವನ್ನು ಜೂನ್ 2010ರೊಳಗೆ ಪೂರ್ಣಗೊಳಿಸಲು ದಾನಿ ಸಂಸ್ಥೆಗಳಿಗೆ ಅಗತ್ಯ ಸಹಾಯ ಒದಗಿಸಲಾಗುವುದು

- ಸುಧಾರಿತ ಗ್ರಾಮೀಣ ವಸತಿ ಯೋಜನೆಯನ್ನು ರೂಪಿಸಲು ಫಲಾನುಭವಿ ಕುಟುಂಬದ ವತಿಯಿಂದ ರೂ.10,000 ವಂತಿಗೆಯೊಂದಿಗೆ ಗ್ರಾಮೀಣ ವಸತಿಯೋಜನೆಗಳಲ್ಲಿ ಪ್ರತಿ ಮನೆಯ ನಿರ್ಮಾಣಕ್ಕೆ ಮಾಡಲಾಗುತ್ತಿರುವ ವೆಚ್ಚವನ್ನು ರೂ.40,000ದಿಂದ ರೂ.60000ಕ್ಕೆ ಏರಿಕೆ. ಈ ಯೋಜನೆಯಡಿ 1.50 ಲಕ್ಷ ಮನೆಗಳ ನಿರ್ಮಾಣ

- ವಾಜಪೇಯಿ ವಸತಿ ಯೋಜನೆಯಡಿ ಫಲಾನುಭವಿಗಳ ವಂತಿಗೆ, ಬ್ಯಾಂಕುಗಳ ಸಾಲ ಹಾಗೂ ಸರ್ಕಾರದ ಸಹಾಯಧನ ಒಳಗೊಂಡಂತೆ ಪ್ರತಿ ಮನೆಗೆ ರೂ.1.25 ಲಕ್ಷ ವೆಚ್ಚದಲ್ಲಿ 50,000 ಮನೆಗಳ ನಿರ್ಮಾಣ

- ನಗರ ಪ್ರದೇಶಗಳು ಮತ್ತು ಸಣ್ಣ ಪಟ್ಟಣಗಳ ಮಧ್ಯಮವರ್ಗಗಳ ವಸತಿ ಸಮಸ್ಯೆಯನ್ನು ಪರಿಹರಿಸಲು 'ನನ್ನ ಮನೆ' ಯೋಜನೆಯ ಪ್ರಾರಂಭ

- ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನ ರಹಿತ ಕುಟುಂಬಗಳಿಗೆ ಉಚಿತ ನಿವೇಶನಗಳನ್ನು ಒದಗಿಸಲು ರೂ.75 ಕೋಟಿ

- ಮಾರ್ಚ್ 2010ರವರೆಗಿನ ಅಸಲಿನ ಕಂತುಗಳನ್ನು ಡಿಸೆಂಬರ್ 2010ರೊಳಗೆ ಮರುಪಾವತಿ ಮಾಡುವ ಆಶ್ರಯ ಫಲಾನುಭವಿಗಳಿಗೆ ಸಾಲದ ಮೇಲೆ ಬಡ್ಡಿ ಮನ್ನಾ

**ಇಂಧನ ಕ್ಷೇತ್ರದ ಅಭಿವೃದ್ಧಿ**

- ರಾಜ್ಯದ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಈಗ 8000 ಮೆಗಾವ್ಯಾಟ್ ತಲುಪಿದ್ದು ಇದನ್ನು ಮುಂದಿನ ಐದು ವರ್ಷಗಳಲ್ಲಿ ಇಮ್ಮಡಿಗೊಳಿಸುವ ಸಾಧ್ಯತೆಯಿದೆ. ಇದಕ್ಕಾಗಿ ವಿಜಾಪುರ ಜಿಲ್ಲೆಯ ಕೂಡಗಿಯಲ್ಲಿ 4000 ಮೆಗಾವ್ಯಾಟ್, ರಾಯಚೂರಿನ ಎಡಮರಸ್ ಮತ್ತು ಎಡ್ಲಾಪುರಗಳಲ್ಲಿ 2400 ಮೆಗಾವ್ಯಾಟ್, ಬಳ್ಳಾರಿಯಲ್ಲಿ 1100 ಮೆಗಾವ್ಯಾಟ್, ಶಾಖೋತ್ಪನ್ನ ಘಟಕಗಳಲ್ಲದೆ, ಬಿಡದಿ ಹಾಗೂ ತದರಿಯಲ್ಲಿ ಒಟ್ಟು 3500 ಮೆಗಾವ್ಯಾಟ್ ಸಾಮರ್ಥ್ಯದ ಅನಿಲ ಆಧಾರಿತ ವಿದ್ಯುತ್ ಘಟಕಗಳನ್ನು ಕರ್ನಾಟಕ ವಿದ್ಯುತ್ ನಿಗಮದ ವತಿಯಿಂದ ಸ್ಥಾಪಿಸಲು ಚಾಲನೆ - ಖಾಸಗಿ ಸಹಭಾಗಿತ್ವದೊಡನೆ ಛತ್ತೀಸ್‌ಗಡದಲ್ಲಿ 2400 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ಘಟಕದ ಸ್ಥಾಪನೆ

- 2010-11ರಲ್ಲಿ ಕರ್ನಾಟಕ ವಿದ್ಯುತ್ ನಿಗಮ ಮತ್ತು ವಿದ್ಯುತ್ ವಿತರಣಾ ಸಂಸ್ಥೆಗಳ ಯೋಜನೆಗಳಿಗೆ ರೂ.500 ಕೋಟಿ ಬಂಡವಾಳ ನೆರವು

**ಜಲಸಂಪನ್ಮೂಲ ಮತ್ತು ನೀರಾವರಿ**

- 2010-11ರಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಘಟ್ಟ 1 ಮತ್ತು 2, ಕಾರಂಜಾ, ಬೆಣ್ಣೆತೊರಾ, ಅಮರ್ಜಾ, ಘಟಪ್ರಭಾ 3ನೇ ಘಟ್ಟ ಮತ್ತು ಉಬ್ರಾಣಿ- ಅಮೃತಾಪುರ ಯೋಜನೆಗಳನ್ನೊಳಗೊಂಡಂತೆ ಒಟ್ಟು 14 ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ 56,000 ಹೆಕ್ಟೇರ್ (1.35 ಲಕ್ಷಕ್ಕೂ ಹೆಚ್ಚು ಎಕರೆ) ಜಮೀನಿಗೆ ಹೆಚ್ಚುವರಿ ನೀರಾವರಿ - 2 ಲಕ್ಷ ಹೆಕ್ಟೇರುಗಳಲ್ಲಿ ಹೊಲಗಾಲುವೆಗಳ ನಿರ್ಮಾಣ

- 2010-11ನೇ ಸಾಲಿನಲ್ಲಿ ತ್ವರಿತ ನೀರಾವರಿ ಅಭಿವೃದ್ಧಿ ಕಾರ್ಯಕ್ರಮವೂ ಸೇರಿದಂತೆ ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳಿಗಾಗಿ ಒಟ್ಟು ರೂ.4256 ಕೋಟಿ

**ಸಣ್ಣ ನೀರಾವರಿ**

- ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಲು ಮತ್ತು 1000 ಸಣ್ಣ ನೀರಾವರಿ ಕೆರೆಗಳನ್ನು ಪುನರುಜ್ಜೀವನಗೊಳಿಸಲು ರಾಜ್ಯ ಆಯವ್ಯಯದಿಂದ ರೂ.100 ಕೋಟಿ

- ಕೇಂದ್ರ ಸರ್ಕಾರದ ನೆರವಿನ ತ್ವರಿತ ನೀರಾವರಿ ಅಭಿವೃದ್ಧಿ ಯೋಜನೆಯಡಿ ಕೋಲಾರ, ಚಿಕ್ಕಬಳ್ಳಾಪುರ, ಬೆಳಗಾವಿ, .ಧಾರವಾಡ, ಹಾವೇರಿ, ಗದಗ್, ಗುಲಬರ್ಗ, ಮತ್ತು ಬೀದರ್ ಜಿಲ್ಲೆಗಳಲ್ಲಿ 37 ಕೆರೆಗಳ ನಿರ್ಮಾಣಕ್ಕಾಗಿ ರೂ.40 ಕೋಟಿ

- 2010-11ರಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಏತನೀರಾವರಿ ಯೋಜನೆಗಳು, ಚೆಕ್‌ಡ್ಯಾಂಗಳು ಹಾಗೂ ಬ್ಯಾರೇಜ್‌ಗಳ ನಿರ್ಮಾಣಕ್ಕಾಗಿ ರೂ.100 ಕೋಟಿ. ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಕೈಗೊಂಡಿರುವ ಸುಮಾರು 2000 ನೀರಾವರಿ ಕಾಮಗಾರಿಗಳಿಗೆ ರೂ.842 ಕೋಟಿ.

**ರಸ್ತೆ ಸಂಪರ್ಕ ಜಾಲದ ಅಭಿವೃದ್ಧಿ**

- ಎಲ್ಲಾ ರಾಜ್ಯ ಹೆದ್ದಾರಿಗಳನ್ನು ಏಕಪಥ ರಸ್ತೆಯಿಂದ ದ್ವಿಪಥ ರಸ್ತೆಯ ಮಟ್ಟಕ್ಕೆ ಉನ್ನತೀಕರಿಸಲು ಮುಂದಿನ ಮೂರು ವರ್ಷಗಳಲ್ಲಿ ರೂ.3,000 ಕೋಟಿ ವೆಚ್ಚ ಮಾಡುವ ಅವಶ್ಯಕತೆ ಇದೆ. 2010-11ರಲ್ಲಿ ಇದಕ್ಕಾಗಿ ರೂ.250 ಕೋಟಿ

- ಜಿಲ್ಲಾ ಮುಖ್ಯ ರಸ್ತೆಗಳ ಉನ್ನತೀಕರಣ ಹಾಗೂ ನಿರ್ವಹಣೆಗಾಗಿ ಯೋಜನೆ ಹಾಗೂ ಯೋಜನೇತರ ಆಯವ್ಯಯದಲ್ಲಿ ರೂ.737 ಕೋಟಿ

- ತುಂಗಭದ್ರಾ ನದಿಗೆ ಅಡ್ಡವಾಗಿ ಹರಿಹರ ಹಾಗೂ ಹೊನ್ನಾಳಿ ತಾಲ್ಲೂಕುಗಳಲ್ಲಿ ಸೇತುವೆಗಳನ್ನು ನಿರ್ಮಿಸಲು ರೂ.30 ಕೋಟಿ. ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣಾ ನದಿಗೆ ಸೇತುವೆ ನಿರ್ಮಿಸಲು ರೂ.15 ಕೋಟಿ

- ಕೊಡಗು ಜಿಲ್ಲೆಯಲ್ಲಿ ಉತ್ತಮ ರಸ್ತೆ ಸಂಪರ್ಕ ಒದಗಿಸಲು ರೂ.25 ಕೋಟಿ ವಿಶೇಷ ಪ್ಯಾಕೇಜ್

- ರಾಜ್ಯದ ಬಹುದಿನಗಳ ಬೇಡಿಕೆಗಳ ರೈಲ್ವೇ ಯೋಜನೆಗಳನ್ನು ಸಾಕಾರಗೊಳಿಸಲು ರಾಜ್ಯದ ಪಾಲು ರೂ.600 ಕೋಟಿ

- ರಾಜ್ಯದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಯೋಜನಾ ವರದಿ ಹಾಗೂ ವಿನ್ಯಾಸಗಳನ್ನು ಸಿದ್ಧಪಡಿಸಲು ಯೋಜನಾ ಅಭಿವೃದ್ಧಿ ನಿಧಿ ಸ್ಥಾಪನೆಗೆ ರೂ.10 ಕೋಟಿ

**ನಗರಾಭಿವೃದ್ಧಿ**

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರು ಸರಬರಾಜು, ಮೆಟ್ರೋ ರೈಲು, ರಸ್ತೆ ಅಭಿವೃದ್ಧಿ ಇತ್ಯಾದಿ ಕಾಮಗಾರಿಗಳಿಗಾಗಿ ಮುಂದಿನ ಮೂರು ವರ್ಷಗಳಲ್ಲಿ ರೂ.18,872 ಕೋಟಿ ವಿನಿಯೋಗಿಸಲಾಗುವುದು

- 2010-11ರಿಂದ '**ಮುಖ್ಯಮಂತ್ರಿ ನಗರೋತ್ಥಾನ ಯೋಜನೆ**'ಯನ್ನು ಪ್ರಾರಂಭಿಸಲಾಗುವುದು. ನಗರ ಪ್ರದೇಶಗಳ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ರಸ್ತೆಗಳ ಅಭಿವೃದ್ಧಿ ಮುಂತಾದ ನಿರ್ದಿಷ್ಟ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸ್ಥಳೀಯ ಸಂಸ್ಥೆಗಳಿಗೆ ರೂ.600 ಕೋಟಿ ಅನುದಾನ

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಗರದ ರಸ್ತೆಗಳ ಅಭಿವೃದ್ಧಿ, ಪಾದಚಾರಿ ಮಾರ್ಗಗಳ ಅಭಿವೃದ್ಧಿ, ಮೇಲುಸೇತುವೆ ಹಾಗೂ ಕೆಳಸೇತುವೆಗಳ ನಿರ್ಮಾಣ ಮುಂತಾದ ಮೂಲಭೂತ ಸೌಕರ್ಯಗಳಿಗಾಗಿ ರೂ.3000 ಕೋಟಿ ವೆಚ್ಚ

- ಬೆಂಗಳೂರಿನ ವಿವಿಧ ಭಾಗಗಳಲ್ಲಿ ಬಹುಮಹಡಿ ವಾಹನ ನಿಲುಗಡೆ ಕೇಂದ್ರಗಳನ್ನು ನಿರ್ಮಿಸಲು ಮತ್ತು ಬೆಂಗಳೂರಿನ 10 ಪ್ರಮುಖ ಸಂಚಾರಿ ಮಾರ್ಗಗಳನ್ನು ಉತ್ತಮಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೂ.1000 ಕೋಟಿ ವೆಚ್ಚ

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಗರದ 25 ಕೆರೆಗಳ ಅಭಿವೃದ್ಧಿಗೆ ರೂ.200 ಕೋಟಿ
- ಬೃಹತ್ ಬೆಂಗಳೂರು ವ್ಯಾಪ್ತಿಗೆ ಹೊಸದಾಗಿ ಸೇರಿಸಲ್ಪಟ್ಟ ಗ್ರಾಮಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ಬೆಂಗಳೂರು ಜಲಮಂಡಳಿ ವತಿಯಿಂದ ರೂ.425 ಕೋಟಿ ಯೋಜನೆ
- 24 ಗಂಟೆ ನೀರು ಸರಬರಾಜು ಯೋಜನೆಯನ್ನು ರಾಜ್ಯದ ಇತರ 16 ನಗರಗಳಿಗೆ ವಿಸ್ತರಣೆ
- ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ನಡುವೆ ಚತುಷ್ಪಥ ರಸ್ತೆಯನ್ನು ನಿರ್ಮಿಸಲು ರೂ.50 ಕೋಟಿ
- ಹೊಸ ಜಿಲ್ಲಾ ಕೇಂದ್ರವಾದ ಯಾದಗೀರ ಪಟ್ಟಣದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ರೂ.25 ಕೋಟಿ
- ಉಡುಪಿ ನಗರಪಾಲಿಕೆಯು ತನ್ನ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ನಗರದ ಅಭಿವೃದ್ಧಿಗಾಗಿ ರೂ.25 ಕೋಟಿ
- ನಗರಾಭಿವೃದ್ಧಿ ವಿಷಯದಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ವಿಶ್ವೇರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯಕ್ಕೆ ರೂ.5 ಕೋಟಿ ವಿಶೇಷ ಅನುದಾನ

**ಕೈಗಾರಿಕೆಗಳು**

- ಜೂನ್ 2010ರಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ
- ಅಟೋಮೊಬೈಲ್ ಕ್ಷೇತ್ರ, ಏರೋಸ್ಪೇಸ್ ಕ್ಷೇತ್ರ, ಮತ್ತು ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಕ್ಷೇತ್ರಗಳನ್ನು ಒಳಗೊಂಡಂತೆ ಒಟ್ಟು ರೂ.1.90 ಲಕ್ಷ ಕೋಟಿ ಬಂಡವಾಳ ತೊಡಗಿಸುವ ಸಂಸ್ಥೆಗಳಿಗೆ ಸರ್ಕಾರದ ಅನುಮೋದನೆ
- ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದಲ್ಲಿ ಸುಮಾರು 12,000 ಎಕರೆ ಪ್ರದೇಶದಲ್ಲಿ ವಿಶೇಷ ಬಂಡವಾಳ ಹೂಡಿಕೆ ವಲಯದ ಸ್ಥಾಪನೆ
- ಮೈಸೂರು ನಗರದಿಂದ ಕೈಗಾರಿಕಾ ಉತ್ಪನ್ನಗಳನ್ನು ರಫ್ತು ಮಾಡಲು ಸುಸಜ್ಜಿತ ರಫ್ತು ಕೇಂದ್ರದ ಸ್ಥಾಪನೆ
- ಕರ್ನಾಟಕ ಹಣಕಾಸು ನಿಗಮದಿಂದ ಸಾಲ ಪಡೆದ ಸಣ್ಣ ಉದ್ಯಮಗಳಿಗೆ ಸಹಾಯ ಮಾಡಲು ರಚಿಸಿದ್ದ ಒಂದಾವರ್ತಿ ತೀರುವಳಿ ಯೋಜನೆಯನ್ನು ಡಿಸೆಂಬರ್ 2010ರವರೆಗೆ ವಿಸ್ತರಿಸಿ ಸರ್ಕಾರದ ವತಿಯಿಂದ ರೂ.25 ಕೋಟಿ
- ರಾಜ್ಯದಲ್ಲಿ ಈಗಾಗಲೇ ನೂತನ ಗಣಿನೀತಿಯನ್ನು ಅಳವಡಿಸಲಾಗಿದ್ದು ಅದರಂತೆ, ರಾಜ್ಯದಲ್ಲಿ ಲಭ್ಯವಿರುವ ಖನಿಜ ಸಂಪತ್ತನ್ನು ರಾಜ್ಯದಲ್ಲಿಯೇ ಬಳಸಿ ಮೌಲ್ಯವರ್ಧನೆ ಮಾಡುವ ಕಾರ್ಖಾನೆಗಳಿಗೆ ಆದ್ಯತೆ. ಇದರಿಂದ ಖನಿಜ ಸಂಪತ್ತನ್ನು ವಿದೇಶಗಳಿಗೆ ರಫ್ತು ಮಾಡುವ ಬದಲು ರಾಜ್ಯದಲ್ಲಿ ಉದ್ಯೋಗವಾಕಾಶಗಳ ಸೃಜನೆ
- ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ 5,000 ದಿಂದ 10,000 ಉದ್ಯೋಗಾವಕಾಶಗಳನ್ನು ಸೃಜಿಸುವ ಸಿದ್ಧ ಉಡುಪು ತಯಾರಿಕಾ ಘಟಕಗಳಿಗೆ ಸಹಾಯವನ್ನು ಒದಗಿಸಲು ಸುವರ್ಣ ವಸ್ತ್ರ ನೀತಿ ಯೋಜನೆಯಡಿ ರೂ.60 ಕೋಟಿ
- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ದುಡಿಯುವ ಬಂಡವಾಳವನ್ನು ಹೆಚ್ಚಿಸಲು ರೂ.10 ಕೋಟಿ
- ಹಿಂದುಳಿದ ತಾಲ್ಲೂಕುಗಳಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವತಿಯಿಂದ ಕೈಗಾರಿಕಾ ಕ್ಷೇತ್ರಗಳನ್ನು ಸ್ಥಾಪಿಸಲು ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ.10 ಕೋಟಿ ಅನುದಾನ

**ಪ್ರವಾಸೋದ್ಯಮ**

- ರಾಜ್ಯದಲ್ಲಿ ಪ್ರವಾಸೋದ್ಯಮದ ಮೂಲಸೌಕರ್ಯಗಳ ಅಭಿವೃದ್ಧಿಗೆ ರೂ.204 ಕೋಟಿ

- ಪ್ರವಾಸೋದ್ಯಮದ ಅಭಿವೃದ್ಧಿಗೆ ರಾಜ್ಯದ 100 ಆಯ್ದ ಪ್ರವಾಸಿ ಕೇಂದ್ರಗಳಲ್ಲಿ ಹೋಟೆಲ್ ನಿರ್ಮಿಸುವ ಉದ್ಯಮಿಗಳಿಗೆ 5 ಎಕರೆವರೆಗೆ ಕೃಷಿ ಭೂಮಿಯ ಖರೀದಿಗೆ ಅನುಮತಿ ಮತ್ತು ಶೇ.10ರ ದರದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ. ಇಂತಹ ಉದ್ಯಮಗಳಿಗೆ 3 ವರ್ಷಗಳ ಕಾಲ ವ್ಯಾಟ್ ತೆರಿಗೆಯಿಂದ ವಿನಾಯಿತಿ.
- ಜಗದ್ವಿಖ್ಯಾತವಾದ ವಿಶ್ವಪರಂಪರೆ ಶ್ರೇಣಿಯ ಹಂಪೆಯಲ್ಲಿ 'ಥೀಮ್ ಪಾರ್ಕ್' ನಿರ್ಮಿಸಲು ರೂ.50 ಕೋಟಿ
- ಪ್ರಸಿದ್ಧ ಪ್ರವಾಸಿ ತಾಣವಾದ ಶೃಂಗೇರಿಯ ರಸ್ತೆ ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗೆ ರೂ.5 ಕೋಟಿ

**ಮಾಹಿತಿ ತಂತ್ರಜ್ಞಾನ – ಜೈವಿಕ ತಂತ್ರಜ್ಞಾನ**

- 2010–11ರಲ್ಲಿ ಕನಿಷ್ಠ 100 ಬಿ.ಪಿ.ಒ. ಕೇಂದ್ರಗಳನ್ನು ಸ್ಥಾಪಿಸಲು ರೂ.10 ಕೋಟಿ
- 2010–11ರಲ್ಲಿ ರಾಜ್ಯದ ಸೆಮಿಕಂಡಕ್ಟರ್ ನೀತಿಯ ಅನುಷ್ಠಾನಕ್ಕಾಗಿ ರೂ.10 ಕೋಟಿ
- ರಾಜ್ಯದ ಜೈವಿಕ ತಂತ್ರಜ್ಞಾನ ನೀತಿ ಅಡಿಯಲ್ಲಿ ಹೊಸ ಜೈವಿಕ ತಂತ್ರಜ್ಞಾನ ಘಟಕಗಳನ್ನು ಉತ್ತೇಜಿಸಲು ರೂ.10 ಕೋಟಿ

**ಉದ್ಯೋಗ ಮತ್ತು ತರಬೇತಿ**

- ರಾಜ್ಯದಲ್ಲಿ ಈಗಾಗಲೇ ಪ್ರಾರಂಭಿಸಲಾಗಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಪ್ರತಿ ವಿದ್ಯಾರ್ಥಿಗೆ ಪ್ರತಿವರ್ಷ ರೂ.6000ದಂತೆ ಅನುದಾನವನ್ನು ನೀಡುವ ನೂತನ ಅನುದಾನ ಪದ್ಧತಿಯ ಜಾರಿಗಾಗಿ ರೂ.50 ಕೋಟಿ
- 2010–11ರಿಂದ ಕೈಗಾರಿಕೆ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವ ಖಾಸಗಿ ಆಡಳಿತ ವರ್ಗಗಳಿಗೆ ಪ್ರತಿ ಜಿಲ್ಲೆಯಲ್ಲಿಯೂ ಸರ್ಕಾರಿ ಭೂಮಿಯನ್ನು 5 ಎಕರೆಗಳವರೆಗೆ ಮಾರ್ಗದರ್ಶಿ ಬೆಲೆಯ ಅರ್ಧದಲ್ಲಿ ಒದಗಿಸಲಾಗುವುದು
- ಪ್ರತಿಯೊಂದು ನೂತನ ಕೈಗಾರಿಕಾ ತರಬೇತಿ ಸಂಸ್ಥೆಯ ಸ್ಥಾಪನೆಗೆ ರೂ.25 ಲಕ್ಷಗಳ ಮಿತಿಯಲ್ಲಿ ಬಂಡವಾಳ ವೆಚ್ಚದ ಶೇ.25ರಷ್ಟು ಸಹಾಯಧನ ಒದಗಿಸಲಾಗುವುದು. ಹಿಂದುಳಿದ ತಾಲ್ಲೂಕುಗಳಲ್ಲಿ ಸ್ಥಾಪಿಸುವ ಸಂಸ್ಥೆಗಳಿಗೆ ಶೇ.10 ರಷ್ಟು ಹೆಚ್ಚುವರಿ ಸಹಾಯಧನ. ಇದಕ್ಕಾಗಿ ರೂ.50 ಕೋಟಿ

**ಕಾರ್ಮಿಕ ಕಲ್ಯಾಣ**

- ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯನ್ನು ರಾಜ್ಯದ ಇತರ ಜಿಲ್ಲೆಗಳಿಗೆ ವಿಸ್ತರಿಸಲು ರೂ.15 ಕೋಟಿ
- ಅಸಂಘಟಿತ ಕಾರ್ಮಿಕ ವರ್ಗವನ್ನು ನೂತನ ಪಿಂಚಣಿ ಯೋಜನೆಗೆ ಸೇರಿಸಲು ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ರೂ.1200ರಂತೆ ಮೂರು ವರ್ಷಗಳ ಕಾಲ ನೀಡಲು ನಿರ್ಧರಿಸಿದ್ದು ಇದಕ್ಕಾಗಿ ಸಂಬಂಧಪಟ್ಟ ಕಾರ್ಮಿಕರು ತಮ್ಮ ವಂತಿಗೆಯಾಗಿ ಪ್ರತಿ ತಿಂಗಳು ಕನಿಷ್ಠ ರೂ.100 ವಂತಿಗೆಯ ನೀಡಿಕೆ – ರಾಜ್ಯ ಸರ್ಕಾರದ ವಂತಿಕೆಯಾಗಿ ರೂ.20 ಕೋಟಿ

**ಅರಣ್ಯ ಮತ್ತು ಜೀವಿ ಶಾಸ್ತ್ರ**

- ಹೊಸನಗರ ತಾಲ್ಲೂಕಿನ ಚಕ್ರಾ ಯೋಜನೆಯ ಬಳಿ ಲಭ್ಯವಿರುವ ನೀರಾವರಿ ಇಲಾಖೆಯ ಭೂಮಿ ಮತ್ತು ಕಟ್ಟಡಗಳನ್ನು ಉಪಯೋಗಿಸಿ ನೂತನ ಅರಣ್ಯ ಹಾಗೂ ವನ್ಯಜೀವಿ ಅಧ್ಯಯನ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಲು ರೂ.5 ಕೋಟಿ
- ನಾಗರಹೊಳೆ ವನ್ಯಧಾಮದ ಭದ್ರತೆಗಾಗಿ ವಿದ್ಯುತ್ ಬೇಲಿಯನ್ನು ಅಳವಡಿಸಲು ರೂ.3 ಕೋಟಿ

**ಕನ್ನಡ ಮತ್ತು ಸಂಸ್ಕೃತಿ**

- ಕನ್ನಡ ಭಾಷೆಯ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ರೂ.50 ಕೋಟಿ
- 2010-11ರಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸಲು ರೂ.10 ಕೋಟಿ
- ಗಡಿ ಪ್ರದೇಶಗಳ ಅಭಿವೃದ್ಧಿ ಪ್ರಾಧಿಕಾರದ ಚಟುವಟಿಕೆಗಳಿಗಾಗಿ ರೂ.10 ಕೋಟಿ
- ಕುಮಾರವ್ಯಾಸನ ಕಾವ್ಯ ಕ್ಷೇತ್ರವಾದ ಗದಗದಲ್ಲಿ ಸಾಹಿತ್ಯ ಭವನವನ್ನು ನಿರ್ಮಿಸಲು ರೂ.3 ಕೋಟಿ ಹಾಗೂ ಆತನ ಜನ್ಮ ಸ್ಥಳವಾದ ಕೋಳಿವಾಡದಲ್ಲಿ ಸ್ಮಾರಕವನ್ನು ನಿರ್ಮಿಸಲು ರೂ.1 ಕೋಟಿ
- ಬೆಂಗಳೂರು ನಗರ ಜಿಲ್ಲೆ ಕೆಂಗೇರಿಯಲ್ಲಿ ಮಹಾತ್ಮ ಗಾಂಧೀಜಿಯವರು ಭೇಟಿ ನೀಡಿದ್ದ ಸ್ಥಳದಲ್ಲಿ ಸ್ಮಾರಕ ಭವನವನ್ನು ನಿರ್ಮಿಸಲು ರೂ.1 ಕೋಟಿ
- ರಾಷ್ಟ್ರಪ್ರಶಸ್ತಿ ಪುರಸ್ಕೃತರಿಗೆ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತ ಪ್ರಯಾಣದ ವ್ಯವಸ್ಥೆ
- ಬೆಳಗಾವಿಯಲ್ಲಿ ಕನ್ನಡ ಸಾಂಸ್ಕೃತಿಕ ಭವನ ನಿರ್ಮಾಣಕ್ಕಾಗಿ ರೂ.2 ಕೋಟಿ
- ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಯ ಪಾರಂಪರಿಕ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಸಹ್ಯಾದ್ರಿ ಹೆರಿಟೇಜ್ ಅಭಿವೃದ್ಧಿ ಪ್ರಾಧಿಕಾರವನ್ನು ಶಿವಮೊಗ್ಗದಲ್ಲಿ ಸ್ಥಾಪಿಸಲು ರೂ.20 ಕೋಟಿ ಅನುದಾನ

**ವಾರ್ತಾ ಇಲಾಖೆ**

- ಕನ್ನಡ ಚಲನಚಿತ್ರೋದ್ಯಮದ ಅಮೃತ ಮಹೋತ್ಸವ ಭವನ ನಿರ್ಮಾಣಕ್ಕಾಗಿ ರೂ.5 ಕೋಟಿ ಅನುದಾನ
- ಚಿತ್ರನಟ ದಿವಂಗತ ಡಾ.ವಿಷ್ಣುವರ್ಧನ್‌ರವರ ಸ್ಮಾರಕ ನಿರ್ಮಾಣಕ್ಕಾಗಿ ರೂ.10 ಕೋಟಿ ಹಾಗೂ ದಿವಂಗತ ಡಾ॥ ರಾಜಕುಮಾರ್ ಸ್ಮಾರಕ ಭವನದ ನಿರ್ಮಾಣದ ಮುಂದುವರಿದ ಕಾಮಗಾರಿಗಾಗಿ ರೂ.4 ಕೋಟಿ
- ಬೆಂಗಳೂರಿನಲ್ಲಿ ಪತ್ರಿಕಾ/ಮಾಧ್ಯಮ ಭವನ ನಿರ್ಮಾಣಕ್ಕಾಗಿ ರೂ.5 ಕೋಟಿ – ಜಿಲ್ಲಾ ಕೇಂದ್ರಗಳಲ್ಲಿ ಮಾಧ್ಯಮ ಭವನಗಳನ್ನು ನಿರ್ಮಿಸಲು ರೂ.3 ಕೋಟಿ
- ಪತ್ರಕರ್ತರಿಗೆ ಹಾಲಿ ನೀಡುತ್ತಿರುವ ಮಾಸಾಶನವನ್ನು ರೂ.1000 ದಿಂದ ರೂ.2000ಕ್ಕೆ ಏರಿಕೆ

**ಯುವಜನ ಸೇವೆ ಮತ್ತು ಕ್ರೀಡೆ**

- 2010-11ನೆಯ ಸಾಲಿನಲ್ಲಿ ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆಗೆ ಒಟ್ಟು ರೂ.98 ಕೋಟಿ
- ಮೈಸೂರು, ಶಿವಮೊಗ್ಗ ಹಾಗೂ ಗುಲಬರ್ಗ ನಗರಗಳಲ್ಲಿ ಅಥ್ಲೆಟಿಕ್ಸ್ ಪಂದ್ಯಾವಳಿಗಳಿಗಾಗಿ ಸಿಂಥೆಟಿಕ್ ಟ್ರ್ಯಾಕ್ ಒದಗಿಸಲು ರೂ.5 ಕೋಟಿ
- ನೂತನ ಜಿಲ್ಲಾ ಕೇಂದ್ರವಾದ ಯಾದಗಿರಿಯಲ್ಲಿ ಸ್ಟೇಡಿಯಂ ನಿರ್ಮಿಸಲು ರೂ.2 ಕೋಟಿ
- ಗ್ರಾಮಾಂತರ ಪ್ರದೇಶಗಳಲ್ಲಿ ಗರಡಿ ಮನೆಗಳ ಅಭಿವೃದ್ಧಿಗಾಗಿ ರೂ.2 ಕೋಟಿ

**ಕಂದಾಯ ಇಲಾಖೆ**

- ಸರ್ಕಾರದಿಂದ ವಿವಿಧ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಮಂಜೂರು ಮಾಡಿರುವ ಎಲ್ಲ ಸರ್ಕಾರಿ ಜಮೀನಿನ ಮೋಜಣಿ ಮಾಡಲು ಮತ್ತು ಅವುಗಳ ಎಲ್ಲೆಗಳನ್ನು ಗುರುತಿಸಲು 2010-11ರಲ್ಲಿ ಮೋಜಣಿ ಅಭಿಯಾನವನ್ನು ಕೈಗೊಳ್ಳಲು ರೂ.5 ಕೋಟಿ

- ಈಗಾಗಲೇ ರಾಜ್ಯದ 5 ನಗರಗಳಲ್ಲಿ ಜಿ.ಐ.ಎಸ್.ಆಧಾರಿತ ಯೋಜಣೆ ಮೂಲಕ ಆಸ್ತಿಗಳ ನಕ್ಷೆ ನಿರೂಪಣೆ ಮಾಡುತ್ತಿದ್ದು ಈ ಕಾರ್ಯವನ್ನು ಇನ್ನೂ 10 ನಗರಗಳಿಗೆ ವಿಸ್ತರಣೆ
- ಬೆಳಗಾವಿಯಲ್ಲಿ ನಿರ್ಮಿಸಲಾಗುತ್ತಿರುವ ಸುವರ್ಣ ಸೌಧದ ಕಾಮಗಾರಿಯನ್ನು ಪೂರ್ಣಗೊಳಿಸಲು ರೂ.150 ಕೋಟಿ
- ನೂತನ ಜಿಲ್ಲೆಗಳಾದ ಯಾದಗೀರ್ ಮತ್ತು ಚಿಕ್ಕಬಳ್ಳಾಪುರದಲ್ಲಿ ಹಾಗೂ ಬಳ್ಳಾರಿಯಲ್ಲಿ ಜಿಲ್ಲಾ ಸಂಕೀರ್ಣಗಳನ್ನು ನಿರ್ಮಿಸಲು ಮತ್ತು ಈಗಾಗಲೇ ನಿರ್ಮಾಣ ಹಂತದಲ್ಲಿರುವ ಜಿಲ್ಲಾ ಸಂಕೀರ್ಣಗಳನ್ನು ಪೂರ್ಣಗೊಳಿಸಲು ರೂ.30 ಕೋಟಿ ಒದಗಿಸಲಾಗಿದೆ. ತಾಲ್ಲೂಕು ಮಟ್ಟದ ಮಿನಿ ವಿಧಾನ ಸೌಧಗಳ ನಿರ್ಮಾಣಕ್ಕಾಗಿ ರೂ.25 ಕೋಟಿ

**ಮುಜರಾಯಿ ಇಲಾಖೆ**

- ರಾಜ್ಯದಲ್ಲಿರುವ ಒಟ್ಟು 27,000 ದೇವಸ್ಥಾನಗಳು ಮತ್ತು ಮುಜರಾಯಿ ಸಂಸ್ಥೆಗಳಿಗೆ ನೀಡಲಾಗುತ್ತಿರುವ ತಸದೀಕ್ ಭತ್ಯವನ್ನು ಮಾಸಿಕ ರೂ.600 ರಿಂದ ರೂ.1000ಕ್ಕೆ ಏರಿಕೆ
- ಕೂಡಲಸಂಗಮ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.5 ಕೋಟಿ ಮತ್ತು ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಬಾಕಿ ಕಾಮಗಾರಿಗಳಿಗಾಗಿ ರೂ.5 ಕೋಟಿ
- ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳಿಗಾಗಿ ರೂ.10 ಕೋಟಿ ಹಾಗೂ ಶ್ರವಣಬೆಳಗೊಳ ಬಾಹುಬಲಿ ಕ್ಷೇತ್ರದ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.5 ಕೋಟಿ
- ಎಡೆಯೂರು ಸಿದ್ದಲಿಂಗೇಶ್ವರ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗಾಗಿ ರೂ.10 ಕೋಟಿ
- ತಿರುಪತಿಯಲ್ಲಿ ಕರ್ನಾಟಕದ ಯಾತ್ರಿಗಳ ಸೌಕರ್ಯಕ್ಕಾಗಿ ಅತಿಥಿ ಗೃಹ ನಿರ್ಮಿಸಲು ರೂ.5 ಕೋಟಿ
- ಶಬರಿಮಲೈನಲ್ಲಿ ಕರ್ನಾಟಕದ ಯಾತ್ರಿಗಳ ಉಪಯೋಗಕ್ಕಾಗಿ ಅತಿಥಿ ಗೃಹವನ್ನು ನಿರ್ಮಿಸಲು ರೂ.5 ಕೋಟಿ
- ಮಾನಸ ಸರೋವರದ ಯಾತ್ರಿಗಳಿಗೆ ನೀಡುತ್ತಿರುವ ಅನುದಾನವನ್ನು ರೂ.3 ಕೋಟಿಗೆ ಹೆಚ್ಚಳ
- ಗುಲ್ಬರ್ಗಾ ಜಿಲ್ಲೆಯ ದೇವಲಗಾಣಗಾಪುರದಲ್ಲಿ ದತ್ತಾತ್ರೇಯ ಕ್ಷೇತ್ರದ ಅಭಿವೃದ್ಧಿಗೆ ರೂ.2 ಕೋಟಿ
- ನಾಗಮಂಗಲ ತಾಲ್ಲೂಕಿನಲ್ಲಿ ಆದಿಚುಂಚನಗಿರಿ ಕ್ಷೇತ್ರದ ಅಭಿವೃದ್ಧಿಗೆ ರೂ.5 ಕೋಟಿ
- ಚಿಕ್ಕಮಗಳೂರು ಜಿಲ್ಲೆಯ ರಂಭಾಪುರಿ ಶ್ರೀ ಸೋಮೇಶ್ವರ ಕ್ಷೇತ್ರದ ಅಭಿವೃದ್ಧಿಗೆ ರೂ.3 ಕೋಟಿ– ಹರಿಹರಪುರ ಕ್ಷೇತ್ರದ ಅಭಿವೃದ್ಧಿಗೆ ರೂ.1 ಕೋಟಿ

**ಒಳಾಡಳಿತ ಇಲಾಖೆ**

- 2009–10ರಲ್ಲಿ ಪೋಲೀಸ್ ಇಲಾಖೆಯ ಆಯವ್ಯಯ ಒಟ್ಟಾರೆ ರೂ.2092 ಕೋಟಿಗಳಿಂದ ರೂ.2345 ಕೋಟಿಗಳಿಗೆ ಹೆಚ್ಚಳ
- ಪೋಲೀಸ್ ಸಿಬ್ಬಂದಿಯು ರಜಾದಿನಗಳಲ್ಲಿ ಕರ್ತವ್ಯ ನಿರ್ವಹಿಸುವುದಕ್ಕಾಗಿ ನೀಡುತ್ತಿರುವ ಭತ್ಯೆಯನ್ನು ದಿನಕ್ಕೆ ರೂ.50 ರಿಂದ ರೂ.100ಕ್ಕೆ ಹೆಚ್ಚಳ
- ಪೋಲೀಸ್ ವಸತಿಗಳ ದುರಸ್ತಿ ಹಾಗೂ ನಿರ್ಮಾಣಕ್ಕಾಗಿ ಕ್ರಮವಾಗಿ ರೂ.25 ಕೋಟಿ ಮತ್ತು ರೂ.50 ಕೋಟಿ ಒದಗಿಸಲಾಗುತ್ತಿದೆ.
- ಧಾರವಾಡ, ಮಂಗಳೂರು, ರಾಯಚೂರು, ಕೋಲಾರ, ಬೀದರ್, ಮೈಸೂರು, ದಾವಣಗೆರೆ, ಬಳ್ಳಾರಿ, ಮತ್ತು ಹಾಸನ ನಗರಗಳ ಮಧ್ಯಭಾಗದಿಂದ ನಗರದ ಹೊರಭಾಗಕ್ಕೆ ಜಿಲ್ಲಾ ಕಾರಾಗೃಹಗಳ ಸ್ಥಳಾಂತರ – ರೂ.40 ಕೋಟಿ. ರಾಜ್ಯದಲ್ಲಿ ಕಾರಾಗೃಹಗಳ ಆಧುನೀಕರಣ – ರೂ.5 ಕೋಟಿ

* ಮಂಗಳೂರಿನಲ್ಲಿ ನೂತನ ಪೋಲಿಸ್ ಕಮೀಷನರೇಟ್ ಕಛೇರಿಯ ಸ್ಥಾಪನೆ ಹಾಗೂ ಸಿಬ್ಬಂದಿಗಾಗಿ ರೂ.5 ಕೋಟಿ ಮತ್ತು ಹುಬ್ಬಳ್ಳಿ ಧಾರವಾಡ ಕಮೀಷನರೇಟ್ ಘಟಕದ ಅಭಿವೃದ್ಧಿಗಾಗಿ ರೂ.2 ಕೋಟಿ
* ಚಿಕ್ಕಮಗಳೂರಿನ ಕುದುರೆಮುಖದಲ್ಲಿ ಲಭ್ಯವಿರುವ ಕಟ್ಟಡ ಮುಂತಾದ ಮೂಲ ಸೌಲಭ್ಯಗಳನ್ನು ಉಪಯೋಗಿಸಿ ಕಮಾಂಡೋ ತರಬೇತಿ ಕೇಂದ್ರವನ್ನು ಸ್ಥಾಪಿಸಲು ರೂ.5 ಕೋಟಿ
* ರಾಜ್ಯದಲ್ಲಿ ನೂತನ ಅಗ್ನಿಶಾಮಕ ಘಟಕಗಳ ಸ್ಥಾಪನೆ ಕೆ-ಸೇಫ್ ಯೋಜನೆಯಡಿ ರೂ.25 ಕೋಟಿ. ಅಗ್ನಿಶಾಮಕ ಸೇವೆ ಒದಗಿಸಲು ಮೂರು ಏರಿಯಲ್ ಪ್ಲಾಟ್‌ಫಾರಂಗಳ ಖರೀದಿಗೆ ರೂ.10 ಕೋಟಿ

**ಸೈನಿಕರ ಕಲ್ಯಾಣ**

* ಸೈನಿಕರು ಹಾಗೂ ಮಾಜಿ ಯೋಧರು ಅಥವಾ ಅವರ ಕುಟುಂಬಗಳು ವಾಸಿಸುತ್ತಿರುವ ಸ್ವಂತ ಮನೆಯ ಆಸ್ತಿ ತೆರಿಗೆಯಲ್ಲಿ 2010-11ರಿಂದ ಜಾರಿಗೆ ಬರುವಂತೆ ಶೇ.50 ರಷ್ಟು ವಿನಾಯಿತಿ.

**ಕಾನೂನು ಇಲಾಖೆ**

* ರಾಜ್ಯದಲ್ಲಿ ನ್ಯಾಯಾಲಯಗಳ ಕಟ್ಟಡಗಳ ನಿರ್ಮಾಣ ಮತ್ತು ಪೀಠೋಪಕರಣಗಳಿಗೆ ರೂ.10 ಕೋಟಿ. ಮತ್ತು ನ್ಯಾಯಾಲಯಗಳಿಗೆ ಡಿಜಿಟಲ್ ಗ್ರಂಥಾಲಯದ ಸೌಲಭ್ಯ ಒದಗಿಸಲು ರೂ.1 ಕೋಟಿ

* ಹುಬ್ಬಳ್ಳಿಯಲ್ಲಿನ ಕಾನೂನು ವಿಶ್ವವಿದ್ಯಾನಿಲಯಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲು ರೂ.10 ಕೋಟಿ
* ಬೆಂಗಳೂರಿನ ನ್ಯಾಯಾಲಯ ಸಂಕೀರ್ಣದಲ್ಲಿ ರಾಜ್ಯ ವಕೀಲರ ಸಂಘದ ಕಟ್ಟಡ ನಿರ್ಮಾಣಕ್ಕಾಗಿ ರೂ.2 ಕೋಟಿ
* ಕರ್ನಾಟಕ ವಕೀಲರ ಕ್ಷೇಮಾಭಿವೃದ್ಧಿ ನಿಧಿಗೆ ರೂ.50 ಲಕ್ಷ ಅನುದಾನ

**ಸಾರಿಗೆ ಇಲಾಖೆ**

* ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ತಲಾ ರೂ.25 ಕೋಟಿ

**ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ**

* ಬೆಂಗಳೂರಿನಲ್ಲಿ ಪ್ರಾರಂಭಿಸಲಾದ 60 'ಬೆಂಗಳೂರು ಒನ್' ನಾಗರೀಕ ಸೇವಾ ಕೇಂದ್ರಗಳ ದ್ವಿಗುಣ. ರಾಜ್ಯದ ಇತರ ನಗರಗಳಲ್ಲಿ 'ಕರ್ನಾಟಕ ಒನ್' ಹೆಸರಿನ ನಾಗರೀಕ ಸೇವಾ ಕೇಂದ್ರಗಳನ್ನು ಮತ್ತು ನಾಗರೀಕ ಮಾಹಿತಿ ಜಾಲವನ್ನು ಸ್ಥಾಪಿಸಲು ರೂ.6 ಕೋಟಿ

**ಆಡಳಿತ ಯಂತ್ರದ ಆಧುನೀಕರಣ**

* 'ಅನುಷ್ಠಾನ ಪರ್ವ'ದ ಅಡಿಯಲ್ಲಿ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳನ್ನು 2010-11ನೇ ಸಾಲಿನಲ್ಲಿ ಮುಂದುವರೆಸಿ ಪೂರ್ಣಗೊಳಿಸಲಾಗುವುದು.
* ಪ್ರತಿ ತಿಂಗಳ ಮೊದಲನೇ ಶನಿವಾರದಂದು ಹೋಬಳಿ ಮಟ್ಟದಲ್ಲಿ ನಡೆಸುವ ಜನಸ್ಪಂದನ ಕಾರ್ಯಕ್ರಮವನ್ನು ಮುಂದುವರೆಸಲಾಗುವುದು.

- ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನುಷ್ಠಾನ ಮಾಡುತ್ತಿರುವ ರೂ.50 ಕೋಟಿಗೂ ಮೀರಿದ ಎಲ್ಲಾ ಕಾಮಗಾರಿ/ಯೋಜನೆಗಳ ಪ್ರಗತಿಯನ್ನು ಪ್ರತಿ ಮಾಹೆಯೂ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿಯ ಮೂಲಕ ಪರಾಮರ್ಶಿಸಲಾಗುವುದು
- ತರಬೇತಿ ವೆಚ್ಚಕ್ಕಾಗಿ ಪ್ರತ್ಯೇಕ ಅನುದಾನವನ್ನು ಒದಗಿಸಲಾಗುವುದು.

**ಸರ್ಕಾರಿ ನೌಕರರು**

- ಸರ್ಕಾರಿ ನೌಕರರ ವರ್ಗಾವಣೆ ಪ್ರಕ್ರಿಯೆಯನ್ನು ಸರಳಗೊಳಿಸಲು 'ಸಿ' ಮತ್ತು 'ಡಿ' ಗುಂಪಿನ ನೌಕರರ ವರ್ಗಾವಣೆಯ ಅಧಿಕಾರವನ್ನು ಇಲಾಖಾ ಮುಖ್ಯಸ್ಥರಿಗೆ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ವಹಿಸಲಾಗುವುದು.
- ಸಣ್ಣ ಉಳಿತಾಯ ಇಲಾಖೆಯನ್ನು ಪಿಂಚಣಿ ಇಲಾಖೆಯಾಗಿ ಪರಿವರ್ತಿಸಲಾಗುವುದು. ಇದರಿಂದ ಜಿಲ್ಲಾ ಮಟ್ಟದಲ್ಲಿ ಬಾಕಿ ಉಳಿದಿರುವ ನಿವೃತ್ತಿದಾರರ ಸಮಸ್ಯೆಗಳನ್ನು ಪರಿಹರಿಸಲು ಅನುಕೂಲವಾಗುವುದು.
- ನಿವೃತ್ತ ಸರ್ಕಾರಿ ನೌಕರರಿಗೆ ನೀಡುವ ನಿವೃತ್ತಿ ಉಪದಾನದ ಮೇಲಿನ ಮಿತಿಯನ್ನು ರೂ.3.5 ಲಕ್ಷದಿಂದ ರೂ.6 ಲಕ್ಷಕ್ಕೆ ಏರಿಕೆ
- 'ಡಿ' ಗುಂಪಿನ ಸರ್ಕಾರಿ ನೌಕರರಿಗೆ ಹಿಂದೆ ನೀಡುತ್ತಿದ್ದಂತೆ ಸಮವಸ್ತ್ರ ಭತ್ಯೆ ಪುನರಾರಂಭಿಸಲಾಗುವುದು.

**ತೆರಿಗೇತರ ರಾಜಸ್ವ**

- ಯಂತ್ರೋಪಕರಣಗಳನ್ನು ಹೊರತು ಪಡಿಸಿ ಇತರ ಸಾಮಗ್ರಿಗಳನ್ನು ತುಂಬಿದ 16 ಟನ್ ಗಳಿಗಿಂತಲೂ ಹೆಚ್ಚಿನ ಭಾರವಿರುವ ಪ್ರತಿಯೊಂದು ವಾಹನಕ್ಕೆ ಪ್ರತಿ ಬಾರಿಗೆ ರೂ.500 ರಂತೆ ರಸ್ತೆ ಶುಲ್ಕ

**ತೆರಿಗೆ ಪ್ರಸ್ತಾವನೆಗಳು**

**ವಾಣಿಜ್ಯ ತೆರಿಗೆಗಳು**

**ಮೌಲ್ಯವರ್ಧಿತ ತೆರಿಗೆ – ಪರಿಹಾರ**

- ಭತ್ತ, ಅಕ್ಕಿ, ಗೋಧಿ, ಬೇಳೆಕಾಳುಗಳು, ಅಕ್ಕಿ ಮತ್ತು ಗೋಧಿಯ ಪದಾರ್ಥಗಳ ಮೇಲೆ ಸಂಪೂರ್ಣ ತೆರಿಗೆ ವಿನಾಯಿತಿ 01.4.2010ರಿಂದ ಮತ್ತೊಂದು ವರ್ಷ ಮುಂದುವರಿಕೆ
- ಮಸಾಲೆ ಪುಡಿ ಮಿಶ್ರಣಗಳು, ಗೋಧಿ ಉತ್ಪನ್ನವಾದ ಶಾವಿಗೆಗೆ ಸಮನಾದ ಮ್ಯಾಕರೋನಿ, ಕ್ರೀಡಾ ಟ್ರೋಫಿಗಳು, ಫಲಕಗಳು ಮತ್ತು ಪದಕಗಳು, ಎಲ್ಲಾ ತರಹದ ನಿರುಪಯುಕ್ತ (ಸ್ಕ್ರ್ಯಾಪ್) ವಸ್ತುಗಳು, 15 ಕೆ.ವಿ.ಎ.ಗಿಂತ ಕಡಿಮೆ ಸಾಮರ್ಥ್ಯದ ವಿದ್ಯುತ್ ಜನರೇಟರ್‌ಗಳು, ರೇಲ್ವೆ ಕಾಂಕ್ರೀಟ್ ಸ್ಲೀಪರ್‌ಗಳು ಮತ್ತು ರೂ.200ಕ್ಕೆ ಮೀರದ ಬೆಲೆಯ ಶಾಲಾ ಕೈಚೀಲಗಳ ಮೇಲಿನ ತೆರಿಗೆಯಲ್ಲಿ ಶೇ.12.5ರಿಂದ ಶೇ.5ಕ್ಕೆ ಇಳಿಕೆ
- ನೋಂದಣಿ ಮಾಡಲು ಇರುವ ವಹಿವಾಟಿನ ಕನಿಷ್ಠ ಮಿತಿಯಲ್ಲಿ ರೂ.2 ಲಕ್ಷದಿಂದ ರೂ.5 ಲಕ್ಷಕ್ಕೆ ಏರಿಕೆ
- ರಾಜಿ ತೆರಿಗೆ ಪಾವತಿ (ಕಾಂಪೊಸಿಷನ್) ಯೋಜನೆಗೆ ಆಯ್ಕೆ ಮಾಡಲು ನಿಗದಿ ಮಾಡಿದ ಗರಿಷ್ಠ ವಹಿವಾಟು ಮಿತಿಯನ್ನು ರೂ.15 ಲಕ್ಷದಿಂದ ರೂ.25 ಲಕ್ಷಕ್ಕೆ ಏರಿಕೆ
- ವ್ಯಾಪಾರಿಗಳು ತಮ್ಮ ಲೆಕ್ಕ ಪುಸ್ತಕಗಳನ್ನು ಕಡ್ಡಾಯವಾಗಿ ಪರಿಶೋಧನೆಗೆ (ಆಡಿಟ್) ಒಳಪಡಿಸಿಕೊಳ್ಳಲು ಇರುವ ವಹಿವಾಟಿನ ಮಿತಿಯಲ್ಲಿ ರೂ.40 ಲಕ್ಷ ದಿಂದ ರೂ.60 ಲಕ್ಷಕ್ಕೆ ಏರಿಕೆ
- ಔಷಧಿ ವ್ಯಾಪಾರಿಗಳಿಗೆ ಔಷಧೇತರ ಸರಕುಗಳ ಮಾರಾಟದ ಮೇಲೆ ಗರಿಷ್ಠ ಚಿಲ್ಲರೆ ಬೆಲೆಯ ಆಧಾರದ ಮೇಲೆ ತೆರಿಗೆ ಪಾವತಿಸುವ ಆಯ್ಕೆ ಯೋಜನೆ

- ತೆರಿಗೆದಾರರು ಮುಂಗಡವಾಗಿ ಸ್ಪಷ್ಟೀಕರಣ ಅಥವಾ ಪೂರ್ವಭಾವಿ ನಿರ್ಣಯಗಳನ್ನು ಪಡೆಯಲು ಪೂರ್ವಭಾವಿ ನಿರ್ಣಯ ವ್ಯವಸ್ಥೆಯ ರಚನೆ

**ಅಧಿಕ ಸಂಪನ್ಮೂಲ ಸಂಗ್ರಹ ಕ್ರಮಗಳು**

- ಘೋಷಿತ ಸರಕುಗಳಲ್ಲದ ಮಿಕ್ಕ ಎಲ್ಲಾ ಸರಕುಗಳ ಮೇಲಿನ ಮೌಲ್ಯವರ್ಧಿತ ತೆರಿಗೆಯಲ್ಲಿ ಶೇ.4 ರಿಂದ ಶೇ.5ಕ್ಕೆ ಏರಿಕೆ
- ಮೌಲ್ಯವರ್ಧಿತ ತೆರಿಗೆ ದರದಲ್ಲಿ ಶೇ.12.5 ರಿಂದ ಶೇ.13.5ಕ್ಕೆ ಏರಿಕೆ
- ತಂಬಾಕು ಉತ್ಪನ್ನಗಳ ಮೇಲಿನ ಮೌಲ್ಯವರ್ಧಿತ ತೆರಿಗೆ ಶೇ.12.5ರಿಂದ ಶೇ.15ಕ್ಕೆ ಏರಿಕೆ.
- ತಂಬಾಕು ಉತ್ಪನ್ನಗಳ ಗರಿಷ್ಟ ಚಿಲ್ಲರೆ ಬೆಲೆ ಅನುಸಾರ ಮೌಲ್ಯ ವರ್ಧಿತ ತೆರಿಗೆ

**ವಿಲಾಸ ತೆರಿಗೆ**

- ದೈನಿಕ ರೂ.1000 ದಿಂದ ರೂ.2000ರವರೆಗೆ ಹೋಟೆಲ್‌ಗಳ ಕೊಠಡಿಗಳ ಬಾಡಿಗೆಯ ಮೇಲಿನ ವಿಲಾಸ ತೆರಿಗೆ ಶೇ.6 ರಿಂದ ಶೇ.8ಕ್ಕೆ ಏರಿಕೆ
- ರೂ.2000ಕ್ಕಿಂತ ಹೆಚ್ಚಿನ ಬಾಡಿಗೆಯ ಕೊಠಡಿಗಳ ಮೇಲೆ ವಿಲಾಸ ತೆರಿಗೆ ಶೇ.10ರಿಂದ 12ಕ್ಕೆ ಏರಿಕೆ

**ಪ್ರವೇಶ ತೆರಿಗೆ**

- ಸಕ್ಕರೆಯ ಮೇಲೆ ಕಾರ್ಖಾನೆಗಳ ಹಂತದಲ್ಲಿ ಪ್ರವೇಶ ತೆರಿಗೆ ಸಂಗ್ರಹಣೆ

**ತೆರಿಗೆದಾರರಿಗೆ ಸೌಲಭ್ಯ**

- ತೆರಿಗೆದಾರರು ಎಲೆಕ್ಟ್ರಾನಿಕ್ ವಿಧಾನದ ಮೂಲಕ ತಮ್ಮ ತೆರಿಗೆ ವಿವರಪಟ್ಟಿಯನ್ನು ಸಲ್ಲಿಸಲು ಹಾಗೂ ತೆರಿಗೆ ಪಾವತಿಸಲು ಸೌಲಭ್ಯ

**ಮಾರಾಟ ತೆರಿಗೆ ಕರಸಮಾಧಾನ ಯೋಜನೆ**

- ಮಾರಾಟ ತೆರಿಗೆಯ ಬಾಕಿಯನ್ನು ಜೂನ್ 30, 2010ರೊಳಗೆ ಪಾವತಿ ಮಾಡಿದಲ್ಲಿ ಬಡ್ಡಿ ಪಾವತಿಯಲ್ಲಿ ಪರಿಹಾರ ನೀಡಿಕೆ

**ರಾಜ್ಯ ಅಬಕಾರಿ**

- ಜಾರಿ ಮತ್ತು ತನಿಖಾ ಚಟುವಟಿಕೆಗಳನ್ನು ಇನ್ನೂ ಪರಿಣಾಮಕಾರಿಯಾಗಿ ಜಾರಿಗೆ ತರುವ ಮೂಲಕ ಶೇ.10 ರಷ್ಟು ಬೆಳವಣಿಗೆ ನಿರೀಕ್ಷೆ
- ರೂ.7,500 ಕೋಟಿ ಆದಾಯ ನಿರೀಕ್ಷೆ

**ಕರಸಮಾಧಾನ ಯೋಜನೆ**

- 30 ಜೂನ್ 2010ರೊಳಗೆ ಅಬಕಾರಿ ಬಾಕಿ ಪಾವತಿ ಮಾಡುವವರಿಗೆ ಬಡ್ಡಿ ಪಾವತಿಯಲ್ಲಿ ಪರಿಹಾರ ನೀಡಿಕೆ

**ಮುದ್ರಾಂಕ ಮತ್ತು ನೋಂದಣಿ**

ಮುದ್ರಾಂಕ ಶುಲ್ಕದ ದರ ಪರಿಷ್ಕರಣೆ

- ಕ್ರಯದ ಕರಾರು ಪತ್ರಗಳಿಗೆ ಮುದ್ರಾಂಕ ಶುಲ್ಕದಲ್ಲಿ ಶೇ. 0.25 ರ ಬದಲಿಗೆ ಶೇ. 0.1 ಕ್ಕೆ ಇಳಿಸಿ, ಗರಿಷ್ಠ ಮಿತಿ ರೂ.20,000/- ಗಳಿಗೆ ನಿಗದಿಪಡಿಸಲಾಗಿದೆ ಹಾಗೂ ಜಂಟಿ ಅಭಿವೃದ್ಧಿ ಕರಾರು/ಜಿ.ಪಿ.ಎ. ಪತ್ರಗಳಿಗೆ ಮುದ್ರಾಂಕ ಶುಲ್ಕದ ಗರಿಷ್ಠ ಮಿತಿ ರೂ.1.5 ಲಕ್ಷಗಳಿಗೆ ಮಿತಿಗೊಳಿಸಲಾಗಿದೆ.

- ಹಕ್ಕು ಪತ್ರ ನಿಕ್ಷೇಪ ಸಾಲ ಪತ್ರಗಳಿಗೆ ಮುದ್ರಾಂಕ ಶುಲ್ಕದಲ್ಲಿ ಶೇ.0.25 ರಿಂದ ಶೇ.0.1 ಕ್ಕೆ ಇಳಿಸಿ, ಗರಿಷ್ಠ ಮಿತಿ ರೂ.5 ಲಕ್ಷದಿಂದ ರೂ.50,000/-ಕ್ಕೆ ಇಳಿಕೆ

- ಷೇರು, ಡಿಬೆಂಚರ್ ಮತ್ತು ಇತರೆ ಮಾರುಕಟ್ಟೆ ಭದ್ರತೆಗಳಿಗೆ ಸಂಬಂಧಿಸಿದ ಕರಾರು ಪತ್ರಗಳಿಗೆ ಶುಲ್ಕ ರೂ.200/- ರಿಂದ ರೂ.50/-ಕ್ಕೆ ಇಳಿಕೆ ಹಾಗೂ ಇವುಗಳ ವರ್ಗಾವಣೆ ವ್ಯವಹಾರಗಳಿಗೆ ಗರಿಷ್ಠಮಿತಿ ರೂ.50/-ಕ್ಕೆ ನಿಗದಿ

- ಕಂಪನಿಗಳ ಸಂಯೋಜನೆ ಮತ್ತು ವಿಘಟನೆ ಸಂಬಂಧ ಮುದ್ರಾಂಕ ಶುಲ್ಕವನ್ನು ಶೇ.5 ರಿಂದ 3 ಕ್ಕೆ ಇಳಿಕೆ

- ಸ್ಥಿರಾಸ್ತಿ ಗುತ್ತಿಗೆ ಮತ್ತು ಆಸ್ತಿಗಳ ಪರವಾನಗಿ ವ್ಯವಹಾರಗಳ ಮೇಲಿನ ಮುದ್ರಾಂಕ ಶುಲ್ಕ ಸರಳೀಕರಣ

- ಅಭಿವೃದ್ಧಿ ಹಕ್ಕಿನ ವರ್ಗಾವಣೆ ಸಂಬಂಧ ಮುದ್ರಾಂಕ ಶುಲ್ಕವನ್ನು ಶೇ.1 ನಿಗದಿಪಡಿಸಿದೆ ಮತ್ತು ಅಪಾರ್ಟ್‌ಮೆಂಟ್ / ಪ್ಲಾಟ್‌ಗಳ ಮಾರಾಟದಲ್ಲಿ ಮುದ್ರಾಂಕ ಶುಲ್ಕದ ಸೋರಿಕೆ ತಡೆಗಟ್ಟಲು ಕ್ರಮ

- ಮಳೆನೀರು ಶೇಖರಣ ಘಟಕಗಳು, ಅಸಂಪ್ರದಾಯಿಕ ಇಂಧನ ಮೂಲಗಳು, ವಿದ್ಯಾರ್ಥಿ ವ್ಯಾಸಂಗ, ಇಂದಿರಾ ಆವಾಸ್ ಯೋಜನೆಯಡಿ ನಿರ್ಮಿಸಲಾಗುವ ಮನೆಗಳು ಇವುಗಳಿಗಾಗಿ ಪಡೆವ ಸಾಲ ಪತ್ರಗಳಿಗೆ ಹಾಗೂ ರೈತರ ವ್ಯವಸಾಯ ಸಾಲದ ತೀರುವಳಿ ಪತ್ರಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳು ಮತ್ತು ನಗರಾಭಿವೃದ್ಧಿ ಪ್ರಾಧಿಕಾರಿಗಳಿಗೆ ಉಚಿತವಾಗಿ ನೀಡುವ ಆಸ್ತಿಗಳಿಗೆ ಸಂಪೂರ್ಣ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ವಿನಾಯಿತಿ

**ಮೋಟಾರು ವಾಹನ ತೆರಿಗೆಗಳು**

- 2010-11ರ ಅವಧಿಯಲ್ಲಿ ರೂ.2200 ಕೋಟಿ ತೆರಿಗೆ ಸಂಗ್ರಹಣೆ ನಿರೀಕ್ಷೆ

- ಕೇಂದ್ರ ಸರ್ಕಾರಿ ನೌಕರರು ಖರೀದಿಸುವ ದ್ವಿಚಕ್ರ ವಾಹನಗಳ ಮೇಲಿನ ತ್ರೈಮಾಸಿಕ ತೆರಿಗೆ ರೂ.25 ರಿಂದ 125ಕ್ಕೆ ಹೆಚ್ಚಳ. ಕಾರು, ಜೀಪು ಮುಂತಾದ ವಾಹನಗಳ ತ್ರೈಮಾಸಿಕ ತೆರಿಗೆ ರೂ.187.50 ರಿಂದ ರೂ.500ಕ್ಕೆ ಏರಿಕೆ

- 5500 ಕೆ.ಜಿ.ವರೆಗಿನ ಭಾರದ ಲಘು ಗೂಡ್ಸ್ ವಾಹನಗಳ ಮೇಲೆಯೂ ಜೀವಾವಧಿ ತೆರಿಗೆ ವಿಸ್ತರಣೆ. ಈಗಾಗಲೇ ಬಳಕೆಯಲ್ಲಿರುವ ಗೂಡ್ಸ್ ವಾಹನಗಳಿಗೂ ಕೂಡ ಜೀವಾವಧಿ ತೆರಿಗೆ

- ಸ್ಟೇಜ್ ಕ್ಯಾರೇಜುಗಳ ತೆರಿಗೆಯಲ್ಲಿ ಪ್ರತಿ ಸೀಟಿಗೆ ತ್ರೈಮಾಸಿಕ ರೂ.500 ರಿಂದ ರೂ.600ಕ್ಕೆ ಏರಿಕೆ

- ವಿಶೇಷ ರಹದಾರಿ ಪಡೆದು ಸಂಚರಿಸುವ ಸ್ಟೇಜ್ ಕ್ಯಾರೇಜ್‌ಗಳ ತೆರಿಗೆಯಲ್ಲಿ ಪ್ರತಿ ಸೀಟಿಗೆ ತ್ರೈಮಾಸಿಕ ರೂ.700 ರಿಂದ ರೂ.1,000ಕ್ಕೆ ಏರಿಕೆ

- ದ್ವಿಚಕ್ರವಾಹನಗಳ ಮೇಲಿನ ಜೀವಾವಧಿ ತೆರಿಗೆಯಲ್ಲಿ ಏರಿಕೆ

- ಮೋಟಾರು ಕಾರುಗಳ ಹಾಗೂ ಜೀಪ್‌ಗಳ ಜೀವಾವಧಿ ತೆರಿಗೆಯಲ್ಲಿ ಏರಿಕೆ

- ಅಖಿಲ ಭಾರತ ಪರ್ಮಿಟ್‌ವುಳ್ಳ ಟೂರಿಸ್ಟ್ ಆಮ್ನಿ ಬಸ್‌ಗಳ ತ್ರೈಮಾಸಿಕ ತೆರಿಗೆಯಲ್ಲಿ ರೂ.2500 ರಿಂದ ರೂ.2,750ಕ್ಕೆ ಏರಿಕೆ

- ಕಟ್ಟಡ ನಿರ್ಮಾಣಕ್ಕೆ ಬಳಸುವ ವಾಹನಗಳಾದ, ಮೊಬೈಲ್ ಕ್ರೇನ್, ಟವರ್ ವ್ಯಾಗನ್, ಟಿಪ್ಪರ್, ಫೋರ್ಕ್ ಲಿಫ್ಟ್, ಏರ್ ಕಂಪ್ರೆಸರ್, ಮತ್ತು ಜನರೇಟರ್ ಅಳವಡಿಸಿದ ವಾಹನಗಳ ಮೇಲೆ ಶೇ.10ರಷ್ಟು ಜೀವಾವಧಿ ತೆರಿಗೆ

– – – –